ಹೋಯಿತು. ಹೀಗೇ ಪ್ರತಿವಾರ ನವಿಲು ಬಂದು ವಜ್ರವನ್ನು ಕೊಡುತ್ತಲೇ ಇತ್ತು. ಮಣಿ ಹೆತ್ತವರು ಅವುಗಳನ್ನು ಮಾರಿ ಕೋಟ್ಯಧೀಶರಾದರು. ಮನೆ. ಒಡವೆ, ಕಾರು, ಜಮೀನು, ಹೊಲಗದ್ದೆಗಳನ್ನು ಕೊಂಡರು.

ಕ್ರಮೇಣ ಹಣ ಸೇರುತ್ತಿದ್ದಂತೆ ಮಣಿಯ ಹೆತ್ತವರ ಗುಣಸ್ವಭಾವಗಳು ಬದಲಾದವು. ಅಲ್ಲಿ ಶ್ರೀಮಂತಿಕೆಯ ದರ್ಪ, ಅಹಂಕಾರ, ಹಣದ ಮದ ತುಂಬಿತು. ಆದರೆ ಮಣಿ ಮಾತ್ರ ಹಾಗೇ ಇದ್ದಳು. ದಿನವೂ ಅವಳು ಬೀದಿಯಲ್ಲಿನ ನಾಯಿ ಬೆಕ್ಕುಗಳಿಗೆ ಆಹಾರ ಕೊಡುವುದನ್ನು ಮಾತ್ರ ಬಿಡಲಿಲ್ಲ. ನವಿಲು ಬಂದಾಗ ಒಳ್ಳೆಯ ಕಾಳು, ಹಣ್ಣುಗಳನ್ನು ತೆಗೆದಿಟ್ಟು ಅದಕ್ಕೆ ತಿನ್ನಿಸುತ್ತಿದ್ದಳು. ಮುದ್ದು ಮಾಡುತ್ತಿದ್ದಳು. ಅದರೊಂದಿಗೆ ಅವಳಿಗೆ ಅನುಬಂಧ ಬೆಳೆದಿತ್ತು.

ಮಣಿ ಅಪ್ಪನಿಗೆ ದುರಾಸೆ ಬಂತು. ನವಿಲಿನ ಹೊಟ್ಟೆಯೊಳಗೆ ತುಂಬಾ ವಜ್ರಗಳಿರಬೇಕು, ಪ್ರತಿವಾರವೂ ಒಂದೊಂದೇ ವಜ್ರವನ್ನು ಕಾದು ಪಡೆಯುವ ಬದಲು ಒಮ್ಮೆಗೇ ಎಲ್ಲವನ್ನೂ ಪಡೆದುಕೊಂಡರೆ ಇಡೀ ಹಳ್ಳಿಯಲ್ಲಿನ ಜಮೀನೆಲ್ಲಾ ಕೊಂಡುಕೊಳ್ಳಬಹುದು, ದೊಡ್ಡ ಕಟ್ಟಡ ಕಟ್ಟಬಹುದು ಎಂಬ ದುರಾಸೆ ಹುಟ್ಟಿತು. ರಾತ್ರಿ ಅವನು ತನ್ನ ಹೆಂಡತಿಯೊಂದಿಗೆ, 'ನಾಳೆ ಆ ನವಿಲು ಬಂದಾಗ ಬಲೆ ಹಾಕಿ ಹಿಡಿದುಬಿಡುವಾ. ನಂತರ ಅದನ್ನು ಕೊಂದು ಹೊಟ್ಟೆಯೊಳಗಿನ ವಜ್ರವನ್ನೆಲ್ಲ ತೆಗೆದು ಮಾರಿದರೆ ಒಟ್ಟಿಗೇ ರಾಶಿ ರಾಶಿ ಹಣ ಸಿಗುತ್ತದೆ. ನಂತರ ಬೇಕಾದ್ದು ಕೊಳ್ಳಬಹುದು. ಹತ್ತು ತಲೆಮಾರಿಗಾಗುವಷ್ಟು ಹಣ ಇರುತ್ತದೆ ನಮ್ಮ ಬಳಿ. ಕೆಲಸ ಮಾಡುವ ಹಾಗೇ ಇಲ್ಲ. ರಾಜರಾಣಿಯಂತೆ ಇರಬಹುದು...' ಎಂದೆಲ್ಲಾ ಹೇಳಿದಾಗ ಅವಳೂ ಒಪ್ಪಿದಳು. ಇಬ್ಬರೂ ಮರುದಿನದ ನವಿಲಿನ ಬೇಟೆಗಾಗಿ ತಯಾರಿ ನಡೆಸಿದರು.

ಮಣಿಗಿನ್ನೂ ನಿದ್ರೆ ಬಂದಿರಲಿಲ್ಲ. ತಂದೆ ತಾಯಿಯ ದುರಾಸೆಯ ಮಾತು ಕೇಳಿ ಗಾಬರಿಯಾದಳು. ಛೀ, ಎಂತಹ ದುಷ್ಟ ಮನುಷ್ಯರು. ಉಪಕಾರ ಮಾಡಿದವರನ್ನು ಕೊಲ್ಲಲು ಹೊರಟಿದ್ದಾರೆ. ಇವರ ಆಸೆಗೆ ಮಿತಿಯೇ ಇಲ್ಲವೇ. ಪಾಪ ನವಿಲನ್ನು ಸಾಯಿಸ ಹೊರಟಿದ್ದಾರೆ ಎಂದುಕೊಂಡು ಬೇಸರ ಪಟ್ಟಳು. ಆದರೆ ಅವಳು ಒಂದು ತೀರ್ಮಾನ ಮಾಡಿದಳು.

ಮರುದಿನ ಬೆಳಿಗ್ಗೆ ಅವಳು ಶಾಲೆಗೆ ಹೋದಂತೆ ಮಾಡಿ ಮನೆಯಿಂದ ಹೊರಟು ಸೀದಾ ಕಾಡಿನ ಒಳಹೊಕ್ಕಳು. ನವಿಲು ಬರುವ ದಾರಿಯಲ್ಲಿ ಕಾದುನಿಂತಳು. ದೂರದಲ್ಲಿ ನವಿಲು ನಿಧಾನಕ್ಕೆ ಬರುತ್ತಿತ್ತು. ಅದು ಮಣಿಯನ್ನು ನೋಡಿತು. ಮಣಿಗೆ ಅದನ್ನು ನೋಡಿ ನೆಮ್ಮದಿಯಾಯಿತು. ಪ್ರೀತಿಯಿಂದ ಅದರ ಬಳಿ ಹೋಗಿ ಅದರ ಮೈ ಸವರುತ್ತಾ, 'ಮುದ್ದುಮರಿಯೇ ಈ ಮನುಷ್ಯರು ತುಂಬಾ ಕೆಟ್ಟವರು... ಅವರಿಗೆ ಮಿತಿಮೀರಿದ ದುರಾಸೆಯಿದೆ. ಹಣಕ್ಕಾಗಿ ಯಾರನ್ನು ಬೇಕಾದರೂ ಸಾಯಿಸುತ್ತಾರೆ. ಈಗ ನಿನ್ನ ಉಪಕಾರವನ್ನು ಮರೆತು ನಿನ್ನನ್ನು ಕೊಲ್ಲಲು ಬಲೆಹಾಕಿ ಹಿಡಿದು ಕೊಲ್ಲಲು ಕಾಯುತ್ತಿದ್ದಾರೆ – ನಿನ್ನ ಹೊಟ್ಟೆಯೊಳಗಿರುವ ವಜ್ರಗಳನ್ನು ಒಮ್ಮೆಲೇ ಪಡೆಯಬೇಕೆಂಬ ಕೆಟ್ಟ ಆಸೆಯಿಂದ... ಆದ್ದರಿಂದ ನೀನು ಇಂದಿನಿಂದ ಯಾವತ್ತೂ ಇಲ್ಲಿಗೆ ಬರಲೇಬೇಡ, ದೂರ ಹೋಗಿಬಿಡು. ಎಲ್ಲಾದರೂ ಚೆನ್ನಾಗಿರು...' ಎನ್ನುತ್ತಾ ಅದರ ಮುಖಕ್ಕೆ ಮುತ್ತು ಕೊಟ್ಟು ಅಷ್ಟುದೂರ ಬಿಡಲು ಹೋದಳು. ಅದು ಅವಳನ್ನು ನೋಡುತ್ತಾ ಕೃತಜ್ಞತೆಯಿಂದ ತಲೆಯಾಡಿಸಿ ಹೊರಟುಹೋಯಿತು.

ಮಣಿಗೆ ನವಿಲಿನ ಅಗಲಿಕೆಯಿಂದ ಹೃದಯ ಭಾರವಾಯ್ತು. ಆದರೆ ಅದರ ಪ್ರಾಣ ಉಳಿಸಿದ ಹೆಮ್ಮೆ, ಆನಂದದಿಂದ ಮನಸ್ಸು ಹಗುರವಾಯ್ತು.

✿